KARN010022552021

Presented on : 20-12-2021
Registered on : 20-12-2021
Decided on : 25-06-2026
Duration: 04 years, 06 month 06 days

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.

**:ಉಪಸ್ಥಿತರು:**

M H ANNAYYANAVAR
Digitally signed by M H ANNAYYANAVAR
Date: 2026.06.25 15:57:05 +0530

ಶ್ರೀಯುತ ಎಂ.ಹೆಚ್. ಅಣ್ಣಯ್ಯನವರ, ಬಿಕಾಂ.ಎಲ್.ಎಲ್.ಬಿ. (ವಿಶೇಷ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

ದಿನಾಂಕ **25** ನೇ ಜೂನ್ ಮಾಹೆ **2026**

ಮಧ್ಯಸ್ಥಗಾರ ಅರ್ಜಿ ಸಂಖ್ಯೆ **148/2021**

ಅರ್ಜಿದಾರರು : ಶ್ರೀ ಕೆ.ಟಿ.ಶಿವಣ್ಣ,
ಬಿನ್ ಲೇಟ್ ತಿಮ್ಮಯ್ಯ,
ವಯಸ್ಸು ಸುಮಾರು 60 ವರ್ಷ.
ವಾಸಃ ಕೆಂಪನಹಳ್ಳಿ ಗ್ರಾಮ, ಮಾಯನಹಳ್ಳಿ ಅಂಚೆ,
ರಾಮನಗರ ತಾಲ್ಲೂಕು ಮತ್ತು ಜಿಲ್ಲೆ.
**(ಪರವಾಗಿ: ಶ್ರೀ ಬಿ.ಕೆ.ಸಿ., ವಕೀಲರು)**

**-ವಿರುದ್ಧ -**

ಎದುರುದಾರರ: 1. ವಿಶೇಷ ಭೂಸ್ವಾಧೀನಾಧಿಕಾರಿಗಳು
ಮತ್ತು ಸಕ್ಷಮ ಪ್ರಾಧಿಕಾರಿಗಳು,
ಎನ್.ಹೆಚ್.ಎ.ಐ. ರಾಷ್ಟ್ರೀಯ ಹೆದ್ದಾರಿ - 275,
(ಬೆಂಗಳೂರು-ಮೈಸೂರು ವಿಭಾಗ)
ವಿಳಾಸಃ ಬಸವನಪುರ, ರಾಮನಗರ – 562128.

2. ಯೋಜನಾ ನಿರ್ದೇಶಕರು (ತಾಂತ್ರಿಕ),
ಯೋಜನಾ ಅನುಷ್ಠಾನ ಘಟಕ,
ಎನ್.ಹೆಚ್.ಎ.ಐ., ರಾಷ್ಟ್ರೀಯ ಹೆದ್ದಾರಿ-275,
(ಬೆಂಗಳೂರು-ಮೈಸೂರು ವಿಭಾಗ),
ಬಸವನಪುರ, ರಾಮನಗರ – 562 128.

3. ಮಧ್ಯಸ್ಥಗಾರರು ಮತ್ತು ಜಿಲ್ಲಾಧಿಕಾರಿಗಳು,
ರಾಮನಗರ ಜಿಲ್ಲೆ - 570 005.
**(1, 2** ಪರವಾಗಿ **:** ಶ್ರೀ ಬಿ**.**ವಿ**.**ಪಿ**.**ಎ**.,** ವಕೀಲರು**)**
**(3** ರವರ ಪರವಾಗಿ ಶ್ರೀ ಡಿ**.**ಜಿ**.**ಪಿ**.)**

*****

**<u>:: ತೀರ್ಪು ::</u>**

ಅರ್ಜಿದಾರರ ಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ಮಧ್ಯಸ್ಥಗಾರ ಮತ್ತು ಸಂಧಾನ ಕಾಯ್ದೆ 1996 ರ ಕಲಂ.34 ರ ಜೊತೆಗೆ ಸಹವಾಚಕ ರಾಷ್ಟ್ರೀಯ ಹೆದ್ದಾರಿ 1956 ಕಲಂ.3 ಜಿ(6) ರಡಿಯಲ್ಲಿ ಅರ್ಜಿ ಸಲ್ಲಿಸಿ ಮಾನ್ಯ ನ್ಯಾಯಾಲಯವು 3 ನೇ ಎದುರುದಾರರು ಎಲ್ಎಕ್ಯೂ**(**ಎ**)/**ಎನ್ಹೆಚ್**-275/**ಸಿಆರ್**/208/2017-18** ದಿನಾಂಕ **01-12-2020** ರಂದು ಮಾಡಿದಂತ ಆದೇಶವನ್ನು ರದ್ದುಪಡಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

2. <u>ಈ ಕೇಸಿನ ಸಂಕ್ಷಿಪ್ತ ಸಾರಾಂಶ**:**</u>

ಅರ್ಜಿದಾರರು ರಾಮನಗರ ತಾಲ್ಲೂಕು, ಕಲ್ಲುಗೋಪನಹಳ್ಳಿ ಗ್ರಾಮದ ಸರ್ವೆ ನಂ.31/6, ಕ್ಷೇತ್ರ 218 ಚ.ಮೀ. ಜಮೀನು ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿ - 275 ಕ್ಕೆ ಅಂದರೆ 1 ನೇ ಎದುರುದಾರರು ಸ್ವಾಧೀನಪಡಿಸಿಕೊಂಡಿದ್ದು, ಇದಕ್ಕೆ ಸಂಬಂಧಪಟ್ಟಂತೆ ಸದರಿ ಕಾನೂನು ಕಲಂ.3(ಎ) ದಿನಾಂಕ 18.09.2016 ರ ಪ್ರಕಾರ ಪ್ರಾಥಮಿಕ ಅಧಿಸೂಚನೆ, ಕಲಂ.3(ಡಿ) ಪ್ರಕಾರ ದಿನಾಂಕ 23.09.2016 ರ ಅಂತಿಮ

ಅಧಿಸೂಚನೆ, ದಿನಾಂಕ 11-03-2017 ರಂದು ಅವಾರ್ಡ್ ಮಾಡಿ, ದಿನಾಂಕ 27-10-2017 ರಂದು ಅರ್ಜಿದಾರರಿಗೆ ಅವಾರ್ಡ್ ನೋಟೀಸ್ ಕಳುಹಿಸಿ ಎಕರೆಗೆ ರೂ.1,54,00,000/- ಪರಿಹಾರ ನಿಗಧಿಪಡಿಸಿದ್ದು, ಭೂಸ್ವಾಧೀನಪಡಿಸಿಕೊಂಡಂತ ಕ್ಷೇತ್ರಕ್ಕೆ ಪರಿಹಾರ ರೂ.4,14,636/- ಮತ್ತು ವಿನ್ಯಾಸಕ್ಕೆ ರೂ.2,60,858/-, ಭೂಮಾಲೀಕರಿಗೆ ಪಾವತಿ ಮಾಡಿದ ಹಣ ರೂ.14,16,197/- ನಿಗಧಿಪಡಿಸಿ ನಂತರ ಉಭಯ ವಕೀಲರ ವಾದವನ್ನು ಪರಿಗಣಿಸಿ ಹೆಚ್ಚಿಗೆ ಪರಿಹಾರ ನೀಡಬೇಕು ಅಂತಾ ಕೇಳಿದ ವಿನಂತಿಯನ್ನು ತಿರಸ್ಕರಿಸಿ ದಿನಾಂಕ 07.01.2021 ರಂದು ಆದೇಶ ಮಾಡಿರುತ್ತಾರೆ.

3. ಸದರಿ 1 ನೇ ಎದುರುದಾರರು ಮಾರುಕಟ್ಟೆ ಮೌಲ್ಯವನ್ನು ಪರಿಗಣಿಸದೆ ಸಮರ್ಪಕವಾದಂಥ ಪರಿಹಾರವನ್ನು ನೀಡಿಲ್ಲದೇ ಇರುವುದರಿಂದ ಅವಾರ್ಡ್ ಅರ್ಜಿದಾರರಿಗೆ ತೃಪ್ತಿ ಆಗಿಲ್ಲದೇ ಇರುವುದರಿಂದ, ಹೆಚ್ಚಿಗೆ ಪರಿಹಾರ ಬೇಕು ಅಂತಾ 1 ನೇ ಎದುರುದಾರರ ಬಳಿ ತಕರಾರು ಸಲ್ಲಿಸಿದ್ದು, ಆ ಪ್ರಕಾರ ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ 3 ನೇ ಎದುರುದಾರರು ಆರ್ಬಿಟ್ರೇಟರ್ ಆಗಿ ನೇಮಕ ಮಾಡಿದ್ದು, ನಂತರ 3 ನೇ ಎದುರುದಾರರು ಉಭಯ ಪಕ್ಷಗಾರರರಿಗೆ ನೋಟೀಸ್ ಜಾರಿ ಮಾಡಿ ತಕರಾರನ್ನು ಪಡೆದುಕೊಂಡು ಉಭಯ ವಕೀಲರ ಲಿಖಿತ ವಾದ ಮಂಡನೆ, ದಾಖಲೆಗಳನ್ನು ಪರಿಶೀಲಿಸಿ ಭೂಸ್ವಾಧೀನಾಧಿಕಾರಿಗಳು ಮಾಡಿದಂಥ ಅವಾರ್ಡ್ ನ್ಯಾಯ ಸಮ್ಮತವಾಗಿರುತ್ತದೆ ಅಂತಾ ಪರಿಗಣಿಸಿ ದಿನಾಂಕ 01.12.2020 ರಂದು ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿ ಅವಾರ್ಡ್ ಮಾಡಿರುತ್ತಾರೆ.

4. ನಂತರ ಅರ್ಜಿದಾರರು, 3 ನೇ ಎದುರುದಾರರು ಮಾಡಿದ ಅವಾರ್ಡ್ ವಿರುದ್ಧ ಈ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ 3 ನೇ ಎದುರುದಾರರು ಅವಾರ್ಡ್ ಮಾಡುವಾಗ ಸಾಕ್ಷಿ, ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿರುವುದಿಲ್ಲ. 1 ನೇ ಎದುರುದಾರರು ಮಾಡಿದಂತ ಅವಾರ್ಡ್ ನ್ಯಾಯ ಸಮ್ಮತವಾಗಿರುತ್ತದೆ ಅಂತಾ ಪರಿಗಣಿಸಿರುವುದು ನ್ಯಾಯ ಸಮ್ಮತವಾಗಿರುವುದಿಲ್ಲ. 30 ಕ್ರಯಪತ್ರಗಳಲ್ಲಿ ಹೆಚ್ಚಿಗೆ ಮಾರುಕಟ್ಟೆ ಬೆಲೆ ಬಾಳತಕ್ಕಂತ ಕ್ರಯ ಪತ್ರಗಳನ್ನು ಪರಿಗಣಿಸದೆ ಮಾರುಕಟ್ಟೆ ಮೌಲ್ಯವನ್ನು ಸಮರ್ಪಕವಾಗಿ ಪರಿಗಣಿಸದೆ ಮೇಲ್ಮನವಿದಾರರು ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಿದ್ದು ನ್ಯಾಯ ಸಮ್ಮತವಾಗಿರುವುದಿಲ್ಲ. ಆದ್ದರಿಂದ ಸದರಿ ಅವಾರ್ಡನ್ನು ರದ್ದುಪಡಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

5. ನಂತರ ಸದರಿ ಪ್ರಕರಣ ನೊಂದಣಿ ಮಾಡಿಕೊಂಡು ಎದುರುದಾರರಿಗೆ ನೋಟೀಸ್ ಕಳುಹಿಸಲಾಗಿ, 1 ಮತ್ತು 2 ನೇ ಎದುರುದಾರರು ಸದರಿ ಅರ್ಜಿಗೆ ತಕರಾರು ಸಲ್ಲಿಸಿ 3 ನೇ ಎದುರುದಾರರು ಮಾಡಿದಂತ ಅವಾರ್ಡ್ ನ್ಯಾಯಸಮ್ಮತವಾಗಿದ್ದು, ಯಾವುದೇ ಲೋಪ-ದೋಷಗಳಿಂದ ಕೂಡಿರುವುದಿಲ್ಲ. ದಾಖಲಾತಿಗಳನ್ನು ಪರಿಗಣಿಸಿ ಅವಾರ್ಡ್ ಮಾಡಿದ್ದು ನ್ಯಾಯ ಸಮ್ಮತವಾಗಿರುತ್ತದೆ. ಸದರಿ ಅವಾರ್ಡನ್ನು ಬದಲಾವಣೆ ಮಾಡಲು ಯಾವುದೇ ಅಂಶಗಳು ಕಂಡು ಬಂದಿರುವುದಿಲ್ಲ. ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕೆಂದು ತಕರಾರು ಸಲ್ಲಿಸಿರುತ್ತಾರೆ.

6. 3 ನೇ ಎದುರುದಾರರರಿಗೆ ನೋಟೀಸ್ ಜಾರಿಯಾಗಿದ್ದು, ತಕರಾರು ಸಲ್ಲಿಸಿರುತ್ತಾರೆ. ತಕರಾರಿನಲ್ಲಿ ಸದರಿ ಎದುರುದಾರರು ಅರ್ಜಿದಾರರು ಹಾಜರುಪಡಿಸಿದಂತ ದಾಖಲಾತಿಗಳು,

ಲಿಖಿತ ವಾದ ಮಂಡನೆ, ಕಾನೂನು ಅಂಶಗಳನ್ನು ಪರಿಗಣಿಸಿ ಸಮರ್ಪಕವಾದ ಕಾರಣಗಳನ್ನು ನೀಡಿ ಅವಾರ್ಡ್ ಮಾಡಿದ್ದು, ಸದರಿ ಅವಾರ್ಡನ್ನು ರದ್ದುಪಡಿಸಲು ಯಾವುದೇ ಸಕಾರಣಗಳು ಇರುವುದಿಲ್ಲ. ಆದ್ದರಿಂದ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಬೇಕೆಂದು ತಕರಾರು ಸಲ್ಲಿಸಿರುತ್ತಾರೆ.

7. ಉಭಯ ವಕೀಲರ ವಾದವನ್ನು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆ:-

1. ಅರ್ಜಿದಾರರು, 3 ನೇ ಎದುರುದಾರರು ಪ್ರಕರಣ ಸಂಖ್ಯೆ ಎಲ್ ಎಕ್ಯೂ(ಎ)/ಎನ್‌ಹೆಚ್-275/ಸಿಆರ್/208/2017-18 ದಿನಾಂಕ 01.12.2020 ರಂದು ವಜಾ ಮಾಡಲು ನೀಡಿದ ಕಾರಣಗಳು ನ್ಯಾಯ ಸಮ್ಮತವಾಗಿರುವುದಿಲ್ಲ ಅಂತಾ ಮೇಲ್ನೋಟಕ್ಕೆ ರುಜುವಾತುಪಡಿಸುತ್ತಾರೆಯೇ?

2. ಹಾಗಿದ್ದಲ್ಲಿ, 3 ನೇ ಎದುರುದಾರರು ಮಾಡಿದ ಆದೇಶದಲ್ಲಿ ಮಾನ್ಯ ನ್ಯಾಯಾಲಯವು ಹಸ್ತಕ್ಷೇಪ ಮಾಡಬಹುದೇ?

3. ಯಾವ ಆದೇಶ ?

8. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಅಂಶ ನಂ.1 | : | ಸಕಾರಾತ್ಮಕವಾಗಿ |
| ಅಂಶ ನಂ.2 | : | ಸಕಾರಾತ್ಮಕವಾಗಿ |
| ಅಂಶ ನಂ.3 | : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ: |

## :: <u>ಕಾರಣಗಳು</u> ::

9. **<u>ಅಂಶ ಸಂಖ್ಯೆ 1 ಮತ್ತು 2:</u>** ನ್ಯಾಯಾಲಯದ ಅನುಕೂಲಕ್ಕೋಸ್ಕರವಾಗಿ ಈ ಅಂಶಗಳನ್ನು ಏಕಕಾಲಕ್ಕೆ ತೆಗೆದುಕೊಳ್ಳಲಾಗಿದೆ.

10. ಉಭಯ ವಕೀಲರು ವಾದ ಮಂಡನೆ ಮಾಡಿದ್ದನ್ನು ಪರಿಶೀಲಿಸಲಾಗಿ, 3 ನೇ ಎದುರುದಾರರು ಮಾಡಿದ ಅವಾರ್ಡ್ ಹಾಗೂ 1 ನೇ ಎದುರುದಾರರು ಮಾಡಿದಂತ ಅವಾರ್ಡ್ ದಾಖಲೆಗಳನ್ನು ಪರಿಶೀಲಿಸಲಾಗಿ, ಎದುರುದಾರರು ಮಾಡಿದಂಥ ಮಾರುಕಟ್ಟೆ ಮೌಲ್ಯ ನ್ಯಾಯ ಸಮ್ಮತವಾಗಿದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ: ಮೌಲ್ಯಮಾಪನವನ್ನು ಯಾವ ರೀತಿ ಪರಿಗಣಿಸಬೇಕು ಎಂಬುದರ ಬಗ್ಗೆ ಭೂಸ್ವಾಧೀನ ಸ್ಥಳಾಂತರ ಮತ್ತು ಪುನರ್ ವಸತಿಯಲ್ಲಿ ಪಾರದರ್ಶಕ ಹಾಗೂ ನ್ಯಾಯಯುತ ಪರಿಹಾರದ ಹಕ್ಕು ಅಧಿನಿಯಮ, 2013 ಕಲಂ.26(1)(ಎ) ಜಮೀನಿನ ಮಾರುಕಟ್ಟೆ ಬೆಲೆಯನ್ನು ಕಲೆಕ್ಟರ್ ತೀರ್ಮಾನ ಮಾಡುವುದು. ಎ) ಆ ಭೂಮಿಯು ಇರುವಂತ ಪ್ರದೇಶದಲ್ಲಿ ಸಂದರ್ಭಾನುಸಾರ ಚಾಲ್ತಿಯಲ್ಲಿರುವ ಮಾರಾಟ ಪತ್ರ ಅಥವಾ ಮಾರಾಟ ಒಪ್ಪಂದದ ಪತ್ರ ನೋಂದಣಿಯಾಗಿ ಭಾರತ ಸ್ಟ್ಯಾಂಪ್ ಅಧಿನಿಯಮ, 1899 ರಲ್ಲಿ ನಿರ್ದಿಷ್ಟವಾಗಿ ಹೇಳಿರಬಹುದಾದಂತಹ ಮಾರುಕಟ್ಟೆ ದರ, ಯಾವುದಾದರೂ ಇದ್ದರೆ ಅದು ಅಥವಾ ಬಿ) ಹತ್ತಿರದ ಗ್ರಾಮ ಅಥವಾ ಸುತ್ತಮುತ್ತಲಿನ ಹತ್ತಿರದ ಪ್ರದೇಶದಲ್ಲಿ ಇರುವಂಥ ಇದೇ ಬಗೆಯ ಭೂಮಿಗೆ ಇರುವ ಸರಾಸರಿ ಮಾರುಕಟ್ಟೆ ಬೆಲೆ ಆಧಾರದ ಮೇಲೆ ಮಾರುಕಟ್ಟೆ ಮೌಲ್ಯವನ್ನು ಪರಿಗಣಿಸಬೇಕು ಅಂತಾ ಸ್ಪಷ್ಟವಾದ ಕಾನೂನು ಇರುತ್ತದೆ.

11. ಮೇಲೆ ಹೇಳಿದ ಕಾನೂನಿಗೆ ಸಂಬಂಧಪಟ್ಟಂತೆ ಅರ್ಜಿದಾರರು, 3 ನೇ ಎದುರುದಾರರ ಬಳಿ ಈ ಕೆಳಕಂಡ ಕ್ರಯಪತ್ರಗಳನ್ನು ಹಾಜರುಪಡಿಸಿರುತ್ತಾರೆ:

| **Sl. No.** | **Registration Number** | **Article Name** | **Date** | **Sy.No.** | **Extent Guntas** | **Consider Value Rs.** | **Per Acre Rs** |
|---|---|---|---|---|---|---|---|
| 1 | RMN-1-06417/13-14 | Sale Agreement | 25-10-13 | 53/1 | 3.75 | 54,16,600 | 5,77,77,066 |

| | | | | | | | |
|---|---|---|---|---|---|---|---|
| 2 | RMN-1-06926/15-16 | Sale | 23-11-15 | 34/34 | 1.25 | 8,18,000 | 2,61,76,000 |
| 3 | RMN-1-07485/12-13 | Sale Agreement | 04-12-12 | 40/1 | 1 | 5,75,000 | 2,30,00,000 |
| 4 | RMN-1-02412/13-14 | Sale | 06-06-13 | 40/10 | 1 | 5,75,000 | 2,30,00,000 |
| 5 | RMN-1-07187/13-14 | Sale Agreement | 21-11-13 | 34/9 | 1 | 5,60,000 | 2,24,00,000 |
| 6 | RMN-1-00213/15-16 | Sale | 09-04-13 | 34/5 | 1.5 | 7,76,000 | 2,06,93,333 |
| 7 | RMN-1-03840/15-16 | Sale | 28-05-15 | 28/1B | 3 | 15,52,000 | 2,06,93,333 |
| 8 | RMN-1-05900/15-16 | Sale | 29-10-15 | 40/14 | 1.5 | 7,76,000 | 2,06,93,333 |
| 9 | RMN-1-06479/15-16 | Sale Agreement | 16-11-15 | 34/19 | 1 | 5,00,000 | 2,00,00,000 |
| 10 | RMN-1-09157/14-15 | Sale Agreement | 23-01-15 | 40/14 | 1.5 | 6,00,000 | 1,60,00,000 |
| 11 | RMN-1-02900/15-16 | Sale Agreement | 13-07-15 | 53/1 | 5.5 | 16,00,000 | 1,16,36,363 |
| 12 | RMN-1-03360/15-16 | Sale | 30-07-15 | 29/4 | 7 | 18,11,000 | 1,03,48,571 |
| 13 | RMN-1-08668/13-14 | Sale | 04-01-14 | 34/10 | 1.25 | 2,10,000 | 67,20,000 |
| 14 | RMN-1-08778/13-14 | Sale | 10-01-14 | 34/10 | 0.5 | 84,000 | 67,20,000 |
| 15 | RMN-1-00133/14-15 | Sale | 07-04-14 | 34/9 | 1 | 1,68,000 | 67,20,000 |
| 16 | RMN-1-05925/13-14 | Sale | 28-09-13 | 34/10 | 1.5 | 2,52,000 | 67,20,000 |
| 17 | RMN-1-07451/13-14 | Sale | 28-11-13 | 34/25 | 1.25 | 2,10,000 | 67,20,000 |
| 18 | RMN-1-05924/13-14 | Sale | 28-09-13 | 34/10 | 4 | 6,70,000 | 67,00,000 |
| 19 | RMN-1-03634/12-13 | Sale | 29-08-12 | 34/13 | 1.25 | 2,05,000 | 65,60,000 |
| 20 | RMN-1-01549/13-14 | Sale | 15-05-13 | 34/13 | 1.25 | 2,05,000 | 67,60,000 |
| 21 | RMN-1-13196/12-13 | Sale | 16-06-13 | 34/21 | 2.5 | 4,10,000 | 65,60,000 |
| 22 | RMN-1-01552/13-14 | Sale | 15-05-13 | 34/13 | 1.25 | 2,05,000 | 65,60,000 |
| 23 | RMN-1-01555/13-14 | Sale | 15-03-15 | 34/13 | 1.25 | 2,05,000 | 65,60,000 |
| 24 | RMN-1-02486/12-13 | Sale | 16-02-12 | 34/13 | 1.5 | 2,44,000 | 65,06,666 |
| 25 | RMN-1-06635/12-13 | Sale | 07-11-12 | 35/17 | 2 | 3,25,000 | 65,00,000 |
| 26 | RMN-1-05636/13-14 | Sale | 18-09-13 | 34/5 | 1.5 | 2,42,500 | 64,66,666 |
| 27 | RMN-1-07702/13-14 | Sale | 05-12-13 | 29/4 | 1 | 93,000 | 37,20,000 |
| 28 | RMN-1-07706/13-14 | Sale | 05-12-13 | 29/4 | 1 | 93,000 | 37,20,000 |
| 29 | RMN-1-07708/13-14 | Sale | 05-12-13 | 29/4 | 1 | 93,000 | 37,20,000 |
| 30 | RMN-1-05005/13-14 | Sale | 16-08-13 | 27/3 | 50 | 46,25,000 | 37,00,000 |

12. ಮೇಲೆ ಹೇಳಿದ ಕ್ರಯಪತ್ರ ಮತ್ತು ಕರಾರು ಪತ್ರಗಳಲ್ಲಿ ಶೇಕಡಾ 50 ರಷ್ಟು ಹೆಚ್ಚಿಗೆ ದರಗಳಿಗೆ ನೋಂದಣಿಯಾದ 15 ಕ್ರಯಪತ್ರ ಅಥವಾ ಮಾರಾಟದ ಕರಾರು ಪತ್ರ ಇವುಗಳನ್ನು ಸದರಿ ಕಾನೂನು ಕಲಂ.26(1)ರ ಅಡಿಯಲ್ಲಿ ಪರಿಗಣಿಸಬೇಕಾಗಿರುತ್ತದೆ. ಆ ಪ್ರಕಾರ 15 ಕ್ರಯಪತ್ರ ಮತ್ತು ಕರಾರು ಪತ್ರಗಳು ಈ ಕೆಳಗಿನಂತಿವೆ:

| Sl. No. | Registration Number | Article Name | Date | Sy.No. | Extent Guntas | Consider Value Rs. | Per Acre Rs |
|---|---|---|---|---|---|---|---|
| 1 | RMN-1-06417/13-14 | Sale Agreement | 25-10-13 | 53/1 | 3.75 | 54,16,600 | 5,77,77,066 |
| 2 | RMN-1-06926/15-16 | Sale | 23-11-15 | 34/34 | 1.25 | 8,18,000 | 2,61,76,000 |
| 3 | RMN-1-07485/12-13 | Sale Agreement | 04-12-12 | 40/1 | 1 | 5,75,000 | 2,30,00,000 |
| 4 | RMN-1-02412/13-14 | Sale | 06-06-13 | 40/10 | 1 | 5,75,000 | 2,30,00,000 |
| 5 | RMN-1-07187/13-14 | Sale Agreement | 21-11-13 | 34/9 | 1 | 5,60,000 | 2,24,00,000 |
| 6 | RMN-1-00213/15-16 | Sale | 09-04-13 | 34/5 | 1.5 | 7,76,000 | 2,06,93,333 |
| 7 | RMN-1-03840/15-16 | Sale | 28-05-15 | 28/1B | 3 | 15,52,000 | 2,06,93,333 |
| 8 | RMN-1-05900/15-16 | Sale | 29-10-15 | 40/14 | 1.5 | 7,76,000 | 2,06,93,333 |
| 9 | RMN-1-06479/15-16 | Sale Agreement | 16-11-15 | 34/19 | 1 | 5,00,000 | 2,00,00,000 |
| 10 | RMN-1-09157/14-15 | Sale Agreement | 23-01-15 | 40/14 | 1.5 | 6,00,000 | 1,60,00,000 |
| 11 | RMN-1-02900/15-16 | Sale Agreement | 13-07-15 | 53/1 | 5.5 | 16,00,000 | 1,16,36,363 |
| 12 | RMN-1-03360/15-16 | Sale | 30-07-15 | 29/4 | 7 | 18,11,000 | 1,03,48,571 |
| 13 | RMN-1-08668/13-14 | Sale | 04-01-14 | 34/10 | 1.25 | 2,10,000 | 67,20,000 |
| 14 | RMN-1-08778/13-14 | Sale | 10-01-14 | 34/10 | 0.5 | 84,000 | 67,20,000 |
| 15 | RMN-1-00133/14-15 | Sale | 07-04-14 | 34/9 | 1 | 1,68,000 | 67,20,000 |
| | | | | | | | ಒಟ್ಟು ಮೊತ್ತ ರೂ.**29,25,77,999/-** |

13. ಈ ಮೇಲ್ಕಂಡ ಕೋಷ್ಟಕ ಪರಿಶೀಲಿಸಲಾಗಿ, ಒಟ್ಟು ಮೊತ್ತ ರೂ.29,25,77,999/15 = 1,95,05,199/- ಆಗುತ್ತದೆ. ಒಂದು ಎಕೆರೆಗೆ ಸದರಿ ಹಣ ಆಗುತ್ತಿದ್ದರೂ ಸಹಿತ 3 ನೇ ಎದುರುದಾರರು ತಮ್ಮ ಅವಾರ್ಡಿನಲ್ಲಿ ಒಂದು ಎಕೆರೆಗೆ ರೂ.77 ಲಕ್ಷ ಅಂತಾ ಪರಿಗಣಿಸಿರುವುದು ನ್ಯಾಯ ಸಮ್ಮತವಾಗಿರುವುದಿಲ್ಲ. ಎದುರುದಾರರ ಪರ ವಕೀಲರು ವಾದ ಮಾಡುತ್ತಾ ಕರಾರು ಪತ್ರವನ್ನು ಪರಿಗಣಿಸಿರುತ್ತಾರೆ. ಆದರೆ, ಕ್ರಯಪತ್ರ ಮಾತ್ರ ಪರಿಗಣಿಸಬೇಕು ಅಂತಾ ವಾದ ಮಾಡಿದ್ದನ್ನು ಪರಿಶೀಲಿಸಲಾಗಿ, ಸದರಿ ಕಾನೂನು ಕಲಂ.26(1)(ಎ) ಕಾನೂನಿನಲ್ಲಿ ಮಾರಾಟ ಪತ್ರ ಅಥವಾ ಮಾರಾಟದ ಒಪ್ಪಂದದ ಪತ್ರ ಅಂತಾ ನಮೂದಾಗಿರುವುದರಿಂದ ಅರ್ಜಿದಾರರು ಮೇಲೆ ಕೊಟ್ಟಂತಹ ಕ್ರಯಪತ್ರಗಳ ಪ್ರಕಾರ

ಮಾರುಕಟ್ಟೆ ಮೌಲ್ಯವನ್ನು 3 ನೇ ಎದುರುದಾರರು ಪರಿಗಣಿಸಿರುವುದಿಲ್ಲ. ಆದ್ದರಿಂದ ಎದುರುದಾರರ ಪರ ವಕೀಲರ ವಾದ ನ್ಯಾಯ ಸಮ್ಮತವಾಗಿರುವುದಿಲ್ಲ.

14. **<u>3 ನೇ ಎದುರುದಾರರು, ಅರ್ಜಿದಾರರ ಜಮೀನಿನ ಅಕ್ಕ-ಪಕ್ಕ ಗ್ರಾಮದ ಅವಾರ್ಡ ಮಾಡಿದ್ದನ್ನು ಪರಿಗಣಿಸದೇ ಇದ್ದುದ್ದರ ಬಗ್ಗೆ:</u>** ಅರ್ಜಿದಾರರ ಪರ ವಕೀಲರು ಕಲ್ಲುಗೋಪನಹಳ್ಳಿ ಗ್ರಾಮದ ಗ್ರಾಮ ನಕ್ಷೆ ಹಾಜರುಪಡಿಸಿದ್ದು, ಸದರಿ ಗ್ರಾಮಕ್ಕೆ ಹೊಂದಿಕೊಂಡಂತೆ ಉತ್ತರಕ್ಕೆ - ಕೆಂಚನಗುಪ್ಪೆ, ದಕ್ಷಿಣಕ್ಕೆ - ಹೆಗ್ಗಡಗೇರಿ, ಪೂರ್ವಕ್ಕೆ - ಬಾನಂದೂರ, ಪಶ್ಚಿಮಕ್ಕೆ - ಹುಲಿತಾರ ಗ್ರಾಮಗಳು ಇರುತ್ತವೆ. ಅವರಗೆರೆ ಸರ್ವೆ ನಂ.21/4 ಇದಕ್ಕೆ ಸಂಬಂಧಪಟ್ಟಂತೆ ಅವಾರ್ಡ್ ನಂ.ಎಲ್ಎಕ್ಯೂ(ಎ)/ಎನ್‌ಹೆಚ್-275/ಸಿಆರ್/346/ 2017-18 ಅವಾರ್ಡಿನಲ್ಲಿ ಒಂದು ಎಕೆರೆಗೆ ರೂ.40 ಲಕ್ಷ ದರವನ್ನು ಭೂಸ್ವಾಧೀನಾಧಿಕಾರಿಗಳು ನಿಗಧಿಪಡಿಸಿದ್ದು, 3 ನೇ ಎದುರುದಾರರು ಸದರಿ ದರದ ಇನ್ನೊಂದು ಪಟ್ಟು ಹೆಚ್ಚಿಗೆ ನೀಡುವುದರ ಬಗ್ಗೆ ಅಂದರೆ 40 + 40 = ಒಟ್ಟು ರೂ.80 ಲಕ್ಷ, ಒಂದು ಎಕೆರೆಗೆ ನಿಗಧಿಪಡಿಸಿ, ಅದಕ್ಕೆ ಶೇಕಡಾ 100 ರಷ್ಟು ಸೋಲೇಶಿಯಂನ್ನು ಪರಿಗಣಿಸಿದ್ದರ ಬಗ್ಗೆ ಅವಾರ್ಡ್ ಇರುತ್ತದೆ. ಅದೇ ಪ್ರಕಾರ ಕೆಂಚನಗುಪ್ಪೆ ಸರ್ವೆ ನಂ.197, ಹುಲ್ತಾರ್ ಹೊಸದೊಡ್ಡಿ ಸರ್ವೆ ನಂ.1, ಕೆಂಚನಗುಪ್ಪೆ ಸರ್ವೆ ನಂ.164/8, ಇವುಗಳ ಬಗ್ಗೆ ಅವಾರ್ಡ್ ಮಾಡಿರುತ್ತಾರೆ. ಸದರಿ ಅವಾರ್ಡಿನ ಪ್ರಕಾರ ಎದುರುದಾರರು ಹಣವನ್ನೂ ಸಹಿತ ಕಟ್ಟಿದ್ದು ಮೇಲ್ಮನವಿ ಸಲ್ಲಿಸಿರುವುದಿಲ್ಲ ಅಂತಾ ಅರ್ಜಿದಾರರ ಪರ ವಕೀಲರು ವಾದ ಮಂಡಿಸಿದ್ದು, ಎದುರುದಾರರ ಪರ ವಕೀಲರು ಸದರಿ ಅವಾರ್ಡ್ ಬಗ್ಗೆ ಮೇಲ್ಮನವಿ ಸಲ್ಲಿಸಿದ ಬಗ್ಗೆ ವಾದ ಮಂಡಿಸಿಲ್ಲ, ಹಣ ಕೊಟ್ಟಿದ್ದರ ಬಗ್ಗೆಯೂ ಸಹಿ ವಾದ ಮಂಡಿಸಿರುವುದಿಲ್ಲ.

ಸದರಿ ಅವಾರ್ಡನ್ನು ಎದುರುದಾರರು ಒಪ್ಪಿಕೊಂಡಿದ್ದರೂ ಸಹಿತ ಸದರಿ ಅವಾರ್ಡಗಳನ್ನು ಆದೇಶ ಮಾಡುವಾಗ ಪರಿಗಣಿಸಿರುವುದಿಲ್ಲ.

15. <u>**3** ನೇ ಎದುರುದಾರರು ಮಾಡಿದಂಥ ಅವಾರ್ಡ್ ಬಗ್ಗೆ:</u> ಅರ್ಜಿದಾರರ ಜಮೀನು ಖುಷ್ಕಿ ಕೃಷಿ ಜಮೀನಾಗಿದ್ದು, ಆದರೆ, ಅವಾರ್ಡಿನಲ್ಲಿ ಜಮೀನು ಕೃಷಿಯೇತ್ತರ ಉದ್ದೇಶಕ್ಕಾಗಿ ಪರಿವರ್ತನೆ ಮಾಡಿದಂಥ ಜಮೀನಾಗಿರುವುದಿಲ್ಲ ಅಂತಾ ತಪ್ಪು ಅಭಿಪ್ರಾಯ ಪಡೆದುಕೊಂಡು 30 ಕ್ರಯಪತ್ರಗಳನ್ನು ಹಾಜರುಪಡಿಸಿದರೂ ಸಹಿತ ನೋಂದಣಿ ಕ್ರಯಪತ್ರಗಳನ್ನು ಹಾಜರುಪಡಿಸಿಲ್ಲ, ನಂಬಲು ಅರ್ಹ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಅಂತಾ ತಪ್ಪಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ ಅರ್ಜಿದಾರರು ಹಾಜರುಪಡಿಸಿದಂಥ ಕ್ರಯಪತ್ರಗಳನ್ನು 3 ನೇ ಎದುರುದಾರರು ಪರಿಗಣಿಸದೇ ಹಾಗೂ ಅರ್ಜಿದಾರರ ಜಮೀನಿನ ಅಕ್ಕ-ಪಕ್ಕದಲ್ಲಿರವ ಜಮೀನಿಗೆ ಸಂಬಂಧಪಟ್ಟಂತೆ ಅವಾರ್ಡಗಳನ್ನು ಪರಿಗಣಿಸದೇ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಿದ್ದು ನ್ಯಾಯ ಸಮ್ಮತವಾಗಿರುವುದಿಲ್ಲ.

16. <u>ಮಧ್ಯಸ್ಥಗಾರರು ಕಾನೂನು ಕಲಂ**.34**</u> ಅನ್ನು ಪರಿಶೀಲಿಸಲಾಗಿ, 3 ನೇ ಎದುರುದಾರರು ಮಾಡಿದಂತ ಆದೇಶ ಕಾನೂನು ಬಾಹಿರವಾಗಿದ್ದು, ಸಮರ್ಪಕವಾದಂಥ ಕಾರಣಗಳನ್ನು ನೀಡಿಲ್ಲದೇ ಇದ್ದಾಗ, ಹಾಜರುಪಡಿಸಿದಂತ ದಾಖಲಾತಿಗಳನ್ನು ಪರಿಗಣಿಸದೇ ಇದ್ದಾಗ ಅಸ್ಪಷ್ಟವಾಗಿದ್ದಾಗ, ಕಾನೂನು ಅಂಶಗಳನ್ನು ಪರಿಗಣಿಸದೇ ಇದ್ದಾಗ, ಸ್ಪಷ್ಟತೆ ಇಲ್ಲದೇ ಇದ್ದಾಗ, ಇಂತಹ ಸಂದರ್ಭದಲ್ಲಿ ಮಧ್ಯಸ್ಥಗಾರರು ಮಾಡಿದಂತ ಅವಾರ್ಡನ್ನು ರದ್ದುಪಡಿಸತಕ್ಕದ್ದು ಅಂತಾ ಸ್ಪಷ್ಟವಾದ ಕಾನೂನು ಇರುತ್ತವೆ.

17. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸರ್ವೋಚ್ಛ ನ್ಯಾಯಾಲಯವು ತೀರ್ಪುಗಳು ***(2025)2 S.C.C. 417 OPG POWER GENERATION PRIVATE LIMITED -Vs- ENEXIO POWER COOLING SOLUTIONS INDIA PRIVATE LIMITED AND ANOTHER*** ಪರಿಶೀಲಿಸಲಾಗಿ, ಸದರಿ ತೀರ್ಪಿನ ಪ್ಯಾರಾ63 ರಿಂದ 74 ಅನ್ನು ಪರಿಶೀಲಿಸಲಾಗಿ, ಸದರಿ ಕಾನೂನು ಕಲಂ.34(2)(ಬಿ)(ii) ಪ್ರಕಾರ ಆರ್ಬಿಟ್ರಲ್ ಅವಾರ್ಡ್‌ನಲ್ಲಿ ಮಾನ್ಯ ನ್ಯಾಯಾಲಯವು ಹಸ್ತಕ್ಷೇಪ ಮಾಡಲು ಬರಲಾರದು, ಅವಾರ್ಡ್ ಅಕ್ರಮವಾಗಿದ್ದಲ್ಲಿ ಅಥವಾ ಕಾನೂನು ಬಾಹಿರವಾಗಿದ್ದಲ್ಲಿ ಮಾತ್ರ ಪರಿಗಣಿಸಬೇಕಾಗುತ್ತದೆ, ಆರ್ಬಿಟ್ರಲ್ ಇವರು ಸಮರ್ಪಕವಾದ ಕಾರಣಗಳನ್ನು ನೀಡಿ ಆದೇಶ ಮಾಡಿದ್ದಲ್ಲಿ ಮಾನ್ಯ ನ್ಯಾಯಾಲಯ ಸದರಿ ಆದೇಶದಂತೆ ಹಸ್ತಕ್ಷೇಪ ಮಾಡಲು ಬರಲಾರದು ಅಂತ ತೀರ್ಪು ಹಾಜರುಪಡಿಸಿರುತ್ತಾರೆ.

18. ಅದೇ ಪ್ರಕಾರ ಮಾನ್ಯ ಸರ್ವೋಚ್ಛ ನ್ಯಾಯಾಲಯ ***2022 LiveLaw (SC)584 National Highways Authority of India -vs- P.Nagaraju @ Cheluvaiah & Onr.***, “Arbitration and Conciliation Act, 1996; Section 34, 37 – It would not be open for the Court in the proceedings under Section 34 or in the appeal under Section 37 to modify the award, the appropriate course to be adopted in such event is to set aside the award and remit the matter.”

19. ಈ ತೀರ್ಪನ್ನು ಪರಿಶೀಲಿಸಲಾಗಿ, ಸದರಿ ತೀರ್ಪಿನ ಪ್ಯಾರಾ40 ಅನ್ನು ಪರಿಶೀಲಿಸಲಾಗಿ, ಸದರಿ ಮದ್ಯಸ್ಥಗಾರರು ಮಾಡಿದಂತ ಅವಾರ್ಡ್ ನ್ಯಾಯ ಸಮ್ಮತವಾಗಿಲ್ಲದೇ ಇದ್ದಾಗ ಸದರಿ ಅವಾರ್ಡ್ ಅನ್ನು ಬದಲಾವಣೆ ಮಾಡಬೇಕಾಗಿರುವುದರಿಂದ ಸದರಿ ಅವಾರ್ಡ್ ಅನ್ನು ರದ್ದುಪಡಿಸಿ ಪುನಃ ರಿಮ್ಯಾಂಡ್ ಮಾಡಬೇಕು ಅಂತ ತೀರ್ಪು ಇರುತ್ತದೆ. ಅದೇ ಪ್ರಕಾರ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ ***MFA No.2930/2020 The Special Land Acquisition Officer and another – vs – Muthaiah and others,*** ಸದರಿ ತೀರ್ಪಿನ ಪ್ಯಾರಾ7 ರಲ್ಲಿ ಅವಾರ್ಡ್ ಮಾಡಿದ್ದು ನ್ಯಾಯ ಸಮ್ಮತವಾಗಿಲ್ಲದೇ ಇದ್ದಾಗ ಸದರಿ ಅವಾರ್ಡ್ ಬದಲಾವಣೆ ಮಾಡುವ ಸಲುವಾಗಿ ಸದರಿ ಅವಾರ್ಡ್ ಅನ್ನು ರದ್ದುಪಡಿಸಿ ಪ್ರಕರಣವನ್ನು ಜಿಲ್ಲಾ ನ್ಯಾಯಾಲಯಕ್ಕೆ ರಿಮ್ಯಾಂಡ್ ಮಾಡಿದ್ದು ನ್ಯಾಯ ಸಮ್ಮತವಾಗಿರುತ್ತದೆ ಅಂತ ತೀರ್ಪು ಇರುತ್ತದೆ.

20. ಈ ಮೇಲ್ಕಂಡ ತೀರ್ಪುಗಳನ್ನು ಈ ಕೇಸಿಗೆ ಪರಿಶೀಲಿಸಲಾಗಿ, 3 ನೇ ಎದುರುದಾರರು ಅರ್ಜಿದಾರರ ಜಮೀನಿನ ಮಾರುಕಟ್ಟೆ ಮೌಲ್ಯವನ್ನು ಸಮರ್ಪಕವಾಗಿ ಪರಿಗಣಿಸಿರುವುದಿಲ್ಲ. ಹೆಚ್ಚಿಗೆ ಮೌಲ್ಯ ಬರತಕ್ಕಂತ ಕ್ರಯ ಪತ್ರಗಳನ್ನು ಪರಿಗಣಿಸಿರುವುದಿಲ್ಲ, ಮಾರುಕಟ್ಟೆ ಮೌಲ್ಯವನ್ನು ಸಮರ್ಪಕವಾಗಿ ಪರಿಗಣಿಸದೇ, ನೈಸರ್ಗಿಕ ನ್ಯಾಯವನ್ನು ಪರಿಗಣಿಸದೇ, ತಾಂತ್ರಿಕ ಕಾರಣಗಳ ಆಧಾರದ ಮೇಲೆ 3 ನೇ ಎದುರುದಾರರು ಅರ್ಜಿದಾರರು ಹೆಚ್ಚಿಗೆ ಪರಿಹಾರ ಕೋರಿ ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಿದ್ದು ನ್ಯಾಯಸಮ್ಮತವಾಗಿರುವುದಿಲ್ಲ. ಆದ್ದರಿಂದ ಈ ಹಂತದಲ್ಲಿ 3 ನೇ ಎದುರುದಾರರು ಮಾಡಿದಂತ ಆದೇಶದಲ್ಲಿ ಮಾನ್ಯ ನ್ಯಾಯಾಲಯವು ಹಸ್ತಕ್ಷೇಪ ಮಾಡುವುದು

ಅವಶ್ಯಕವಾಗಿರುತ್ತದೆ. ಆದ್ದರಿಂದ ಅಂಶ ಸಂಖ್ಯೆ ***1*** ಮತ್ತು ***2*** ನ್ನು ಸಕಾರಾತ್ಮಕವಾಗಿ ಉತ್ತರಿಸಲಾಯಿತು.

21. <u>ಅಂಶ ಸಂಖ್ಯೆ **3:**</u> ಅಂಶ ಸಂಖ್ಯೆ 1 ಮತ್ತು 2 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಃ

<u>ಆದೇಶ</u>

ಅರ್ಜಿದಾರರ ಪರ ವಕೀಲರು ಮಧ್ಯಸ್ಥಗಾರ ಮತ್ತು ಸಂಧಾನ ಕಾಯ್ದೆ 1996 ರ ಕಲಂ.34 ರ ಜೊತೆಗೆ ಸಹವಾಚಕ ರಾಷ್ಟ್ರೀಯ ಹೆದ್ದಾರಿ 1956, ಕಲಂ.3 ಜಿ(6)ರ ಅಡಿಯಲ್ಲಿ ಸಲ್ಲಿಸಿದಂಥ ಅರ್ಜಿಯನ್ನು ಪುರಸ್ಕರಿಸಲಾಯಿತು.

3 ನೇ ಎದುರುದಾರರು <u>ಎಲ್ಎಕ್ಯೂ**(**ಎ**)/**ಎನ್ಹೆಚ್**-275/** ಸಿಆರ್**/208/2017-18** ದಿನಾಂಕ **01.12.2020**</u> ಮಾಡಿದಂತ ಅವಾರ್ಡನ್ನು ರದ್ದುಗೊಳಿಸಲಾಯಿತು.

ಸದರಿ ಪ್ರಕರಣವನ್ನು ಪುನಃ ಕಾನೂನು ಪ್ರಕಾರ ಇತ್ಯರ್ಥಪಡಿಸಿ ಪುನಃ ಅವಾರ್ಡ್ ಮಾಡುವ ಸಲುವಾಗಿ ಸದರಿ ಪ್ರಕರಣವನ್ನು 3 ನೇ ಎದುರುದಾರರಿಗೆ ರಿಮ್ಯಾಂಡ್ ಮಾಡಲು ಆದೇಶ ಮಾಡಲಾಯಿತು.

3 ನೇ ಎದುರುದಾರರು ಪುನಃ ಉಭಯ ಪಕ್ಷಗಾರರಿಗೆ ಅವಕಾಶ ನೀಡಿ ಉಭಯ ಪಕ್ಷಗಾರರ ಕಡೆಯಿಂದ ದಾಖಲಾತಿಗಳನ್ನು ಪಡೆದುಕೊಂಡು ಪುನಃ ದಾಖಲೆಗಳನ್ನು ಕೂಲಂಕುಷವಾಗಿ ಪರಿಗಣಿಸಿ 1 ಮತ್ತು 2 ನೇ ಎದುರುದಾರರು ಅರ್ಜಿದಾರ ಸ್ವತ್ತಿನ ಸ್ವಾಧೀನವನ್ನು ಪಡೆದುಕೊಂಡ ದಿನಾಂಕದಿಂದ ಅರ್ಜಿದಾರರ

ಸ್ವತ್ತಿನ ಮಾರುಕಟ್ಟೆ ಬೆಲೆ ಎಷ್ಟು ಇರುತ್ತದೆ ಎಂಬುದರ ಬಗ್ಗೆ ಪರಿಗಣಿಸಿ ಪುನಃ ಅವಾರ್ಡ್ ಮಾಡತಕ್ಕದು ಅಂತಾ ಆದೇಶ ಮಾಡಲಾಯಿತು.

ಸದರಿ ಆದೇಶದ ಪ್ರತಿಯೊಂದಿಗೆ ಈ ಪ್ರಕರಣದ ಕಡತವನ್ನು 3 ನೇ ಎದುರುದಾರರಿಗೆ ಕಳುಹಿಸಿ ಕೊಡಲು ಆದೇಶಿಸಲಾಯಿತು.

ಖರ್ಚಿನ ಮೇಲೆ ಯಾವುದೇ ಆದೇಶ ಇಲ್ಲ.

*(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ ಗ್ರೇಡ್ - III ರವರಿಗೆ ನೇರವಾಗಿ ಗಣಕಯಂತ್ರ ಪರದೆಯ ಮೇಲೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ **25** ನೇ ಜೂನ್ ಮಾಹೆ **2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

(ಎಂ.ಹೆಚ್. ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ರಾಮನಗರ.

*** ***

NGR